ಅ) ಮೇಲಿನಂತೆ.

**ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಬಾವಿಗಳ ಕುರಿತು.**

2959 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಇರತಕ್ಕ ಕುಡಿಯುವ ನೀರಿನ ಬಾವಿಗಳ ಒಟ್ಟು ಸಂಖ್ಯೆ? ಎಷ್ಟು ಬಾವಿಗಳು ಉಪಯೋಗಕ್ಕೆ ಅರ್ಹವಾಗಿವೆ?*

ಆ) *ಕುಡಿಯುವ ನೀರಿನ ತೊಂದರೆ ಉಂಟಾದಾಗ ಈ ಬಾವಿಗಳ ನೀರನ್ನು ಉಪಯೋಗಿಸಲು ಸಾಧ್ಯವಿಲ್ಲವೇ?*

ಬ) *ಹಾಗಿದ್ದಲ್ಲಿ ಹೂತು ಹೋಗಿರುವ ಬಾವಿಗಳ ಮಣ್ಣು ಹೊಲಸನ್ನು ತೆಗೆದು ಶುದ್ದೀಕರಿಸಿ ಉಪಯೋಗಕ್ಕೆ ಬರುವಂತೆ ಮಾಡಲು ಸರ್ಕಾರ ಕೈಕೊಂಡ ಕ್ರಮವೇನು?*

ಶ್ರೀ ಮೀರಾಜುದ್ದೀನ್ ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಒಟ್ಟು 142 ಬಾವಿಗಳು ಇರುತ್ತವೆ. ಶೇ. 10ರಷ್ಟು ಬಾವಿಗಳು ಉಪಯೋಗಕ್ಕೆ ಅರ್ಹವಾಗಿವೆ. ಶೇ. 90 ರಷ್ಟು ಬಾವಿಗಳಲ್ಲಿ ಮಣ್ಣು ತುಂಬಿಕೊಂಡಿದೆ.

ಆ) ಉಪಯೋಗಕ್ಕೆ ಅರ್ಹವಾಗಿರುವ ಶೇ.10ರಷ್ಟು ಬಾವಿಗಳ ನೀರನ್ನು ಉಪಯೋಗಿಸಲು ಸಾಧ್ಯವಿದೆ.

ಬ) ಹೂತು ಹೋಗಿದ್ದ ಪ್ರತಿಶತ 90 ರಷ್ಟು ಬಾವಿಗಳ ನೀರಿನ ಗುಣಮಟ್ಟ ಮತ್ತು ಪ್ರಮಾಣ ಗಮನಿಸಿ ಮಣ್ಣು ಹೊಲಸನ್ನು ತೆಗೆದು 5 ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಿ ನೀರು ಪೂರೈಸಲಾಗುತ್ತಿದೆ. ಇನ್ನುಳಿದ ಬಾವಿಗಳ ಬಗ್ಗೆ ಪರಿಶೀಲಿಸಿ ನೀರು ಯೋಗ್ಯವಿದ್ದಲ್ಲಿ ಶುದ್ದೀಕರಿಸಲು ಸೂಕ್ತ ಕ್ರಮ ಕೈಕೊಳ್ಳಲಾಗುವುದು.

**ಸವದತ್ತಿ ನಗರದಿಂದ ಹೊರಹೊಮ್ಮುವ ನೀರು ಕಲುಷಿತಗೊಂಡಿರುವುದು.**

2960 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸವದತ್ತಿ ನಗರದಿಂದ ಹೊರಹೊಮ್ಮುವ ನಾಲೆಯ ಕೊಳವೆ ನೀರಿನಿಂದ ಮತ್ತು ಮಲಪ್ರಭಾ ಜಲಾಶಯದ ದಾರಿಯಲ್ಲಿ ಕಸಕಡ್ಡಿಗಳ ರಾಶಿ ಹಾಕುತ್ತಿರುವುದರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರಗಳಿಗೆ ಕುಡಿಯುವ ನೀರು ಪೂರೈಸುವ ಮಲಪ್ರಭಾ ನದಿಯ ನೀರು ಕುಡಿಯಲಾರದಷ್ಟು ಕಲುಷಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಅ) ಹಾಗಿದ್ದಲ್ಲಿ ಈ ರೀತಿ ನೀರು ಕಲುಷಿತವಾಗುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆ ಆಗುತ್ತಿದ್ದು ಹಾಲಿ ಮಲಪ್ರಭಾ ಜಲಾಶಯದ ನೀರಿನ ಗುಣಮಟ್ಟ ಕೊಳಚೆ ನೀರಿನಿಂದ ಕಲುಷಿತಗೊಂಡು ಮಲೀನವಾಗಿರುವುದಿಲ್ಲ. ನೀರಿನ ಗುಣಮಟ್ಟ ತೃಪ್ತಿಕರವಾಗಿದೆ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿರುತ್ತದೆ.

ಆ) ಸವದತ್ತಿ ಪಟ್ಟಣದಿಂದ ಬರುವ ಒಳಚರಂಡಿ ಹಾಗೂ ಕೊಳಚೆ ನೀರನ್ನು ಜಲಾಶಯದ ಹತ್ತಿರ ಇರುವ ಒಂದು ದೊಡ್ಡ ಹೊಂಡದಲ್ಲಿ ಬಿಡಲಾಗಿದೆ. ಈ ಹೊಂಡವು ಜಲಾಶಯದ ಮೇಲ್ಮಟ್ಟದಲ್ಲಿ ಇದ್ದು ಜಲಾಶಯಕ್ಕೆ ಹರಿದು ಬರುವ ಸಾಧ್ಯತೆಗಳು ಇರುತ್ತದೆ. ಇದನ್ನು ತಡೆಗಟ್ಟಲು ಸವದತ್ತಿ ಪಟ್ಟಣಕ್ಕೆ ಸುಸಜ್ಜಿತ ಒಳಚರಂಡಿ ಯೋಜನೆಯನ್ನು ರೂಪಿಸಲು ಸರ್ಕಾರ ಕ್ರಮಕೈಗೊಂಡಿದ್ದು ಇದಕ್ಕೆ ವಿವರವಾದ ಅಂದಾಜನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ತಯಾರಿಸಿದ್ದು, ಈ ಅಂದಾಜಿಗೆ ಅನುಮೋದನೆ ಕೊಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

**ಎಂ.ಆರ್.ಪಿ.ಎಲ್.ನಿಂದ ತೈಲ ಮಿಶ್ರಿತ ನೀರು ಹರಿದು ಭೂಮಿ ಬೆಳೆ ನಾಶ**

2962 - ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1996-97ನೇ ಸಾಲಿನಲ್ಲಿ ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿರುವ ಎಂ.ಆರ್.ಪಿ.ಎಲ್. ನಿಂದ ತೈಲ ಮಿಶ್ರಿತ ನೀರು ಹರಿದು ಎಷ್ಟು ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿರುತ್ತದೆ?*

*ಆ) ಈ ಸಂಬಂಧವಾಗಿ ಕಂಪನಿಯಿಂದ ಪರಿಹಾರಕ್ಕಾಗಿ ಬಿಡುಗಡೆಗೊಂಡ ಮೊತ್ತ ಎಷ್ಟು?*

*ಇ) ವಿತರಣೆಯಲ್ಲಿ ಅನ್ಯಾಯವಾಗಿದೆ ಎಂಬ ಕೃಷಿಕರ ದೂರು ಸರ್ಕಾರಕ್ಕೆ ತಿಳಿದಿದೆಯೇ, ತಿಳಿದಿದ್ದರೆ, ಸರ್ಕಾರದ ಕಡೆಯಿಂದ ಕೈಗೊಳ್ಳಲಾದ ಕ್ರಮಗಳೇನು?*

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಕುತ್ತೆತ್ತೂರು ಗ್ರಾಮದ 91-51 ಎಕರೆ ಮತ್ತು ಸೂರಿಂಜೆ ಗ್ರಾಮದ 34-06 ಎಕರೆ.

ಆ) ಒಟ್ಟು 76 ಭೂ ಮಾಲೀಕರಿಗೆ ರೂ. 4,99,000 ಗಳ ನಗರ ಪರಿಹಾರವನ್ನು ಎಂ.ಆರ್.ಪಿ.ಎಲ್. ನವರು ಬಿಡುಗಡೆ ಮಾಡಿದ್ದಾರೆ.

ಇ) ಇಲ್ಲ.